**<u>ದಿನಾಂಕ: 16-06-2011 ರಂದು ಬೆಳಿಗ್ಗೆ 10.30 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು</u>**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | 2 | ಡಿ.ಕನಕರಾಜು, ಉಪ ನಿಯಂತ್ರಕರು (ಹಣಕಾಸು) |
| 3 | ಎನ್.ಶಕುಂತಲ | ಸದಸ್ಯರು | 3 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 4 | ಬಿ.ಆರ್.ಚಂದ್ರಶೇಖರ್ | ಸದಸ್ಯರು | | |
| 5 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 4 | ಕಾ.ಪಾ.ಅ.(ಯೋಜನೆ – ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ ಮಹದೇವಪುರ/ ರಾಜರಾಜೇಶ್ವರಿನಗರ) |
| 6 | ಎಸ್.ಕೇಶವಮೂರ್ತಿ | ಸದಸ್ಯರು | | |
| 7 | ಎಸ್.ವಿಜಯನ್ | ಸದಸ್ಯರು | | |
| 8 | ನಿರ್ಮಲ | ಸದಸ್ಯರು | | |
| 9 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | | |
| 10 | ಅಶ್ವಥ್‌ನಾರಾಯಣ.ಜಿ.ಎ. | ಸದಸ್ಯರು | | |
| 11 | ಹೆಚ್.ಎನ್.ಗಂಗಾಧರ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸಮಿತಿಯು ದಿನಾಂಕ:25-05-2011 ರಂದು ಕೇಳಿರುವ ವಿವರಗಳಿಗೆ ಮಾಹಿತಿಯನ್ನು ನಿಗಧಿತ ಸಮಯದಲ್ಲಿ ಸಮಿತಿಗೆ ಒದಗಿಸುವಂತೆ ಸೂಚಿಸಿದ್ದರೂ ಸಹ, ಈ ದಿನ ಸಮಿತಿಯಿಂದ ಮೂರನೇ ಸಭೆ ನಡೆಯುತ್ತಿದ್ದು, ಈವರೆವಿಗೂ ಮಾಹಿತಿಯನ್ನು ಒದಗಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಇನ್ನು ಮುಂದೆ ಈ ರೀತಿ ಕೋರಿರುವ ಮಾಹಿತಿ ಒದಗಿಸಲು ನಿರ್ಲಕ್ಷ ತೋರಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ತಿಳಿಸುತ್ತಾ, ಕೋರಿರುವ ಮಾಹಿತಿಯನ್ನು ಜರೂರಾಗಿ ಸಮಿತಿಗೆ ಒದಗಿಸುವಂತೆ ಸೂಚಿಸಿದರು.

2010-11ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಯಾದ (ಪಿ.ಓ.ಡಬ್ಲ್ಯೂ) ಕಾರ್ಯಕ್ರಮ ಪಟ್ಟಿಯಲ್ಲಿರುವ ಕಾಮಗಾರಿಗಳ ಬಗ್ಗೆ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ, ರೂ.39,27,86,000ಗಳ ಅನುದಾನವನ್ನು ಮೀಸಲಿರಿಸಿದ್ದು, ಈ ಅನುದಾನವನ್ನು ತೋಟಗಾರಿಕೆ ಇಲಾಖೆ ಮತ್ತು ಕಾರ್ಯಪಾಲಕ ಅಭಿಯಂತರರು(ಯೋಜನೆ) ಇಲಾಖೆಗಳು ಎಷ್ಟೆಷ್ಟು ಅನುದಾನವನ್ನು ಉಪಯೋಗಿಸಿಕೊಂಡಿದೆ ಎಂಬ ಬಗ್ಗೆ ವಿವರವನ್ನು ನೀಡುವಂತೆ ಸೂಚಿಸಿದರು.

**<u>ಶ್ರೀ.ಓಂಪ್ರಕಾಶ್, ತೋಟಗಾರಿಕೆ ಅಧೀಕ್ಷಕರು (ರಾಜರಾಜೇಶ್ವರಿನಗರ)</u>**ರವರು ಮಾತನಾಡುತ್ತಾ, ಸಿವಿಲ್ ಕಾಮಗಾರಿಗಳೆಂದು ಪ್ರತ್ಯೇಕವಾಗಿ ವಿಭಜನೆಯಾಗಿಲ್ಲವೆಂದು, ಸಿವಿಲ್ ವರ್ಕ್‌ಗಳನ್ನು ಸೇರಿಸಿಕೊಂಡು 2010–11 ನೇ ಸಾಲಿನಲ್ಲಿ ಹೆಚ್ಚಿನ ಅಂಶ ನಿರ್ವಹಣೆಗೆ ಕೊಟ್ಟಿದ್ದಾರೆ. ಅದರಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಬೇಕಾಗಿದೆ. ನರ್ಸರಿಗೆ ರೂ.2.00 ಕೋಟಿ ಕೊಟ್ಟಿದ್ದಾರೆ. ರೂ.98.00 ಲಕ್ಷ ತೋಟಗಾರಿಕೆ ಇಲಾಖೆ ಕೊಟ್ಟಿದ್ದಾರೆಂದು ತಿಳಿಸಿದರು.

**<u>ಅಧ್ಯಕ್ಷರು</u>** : ವಾರ್ಡ್ – 128, ಚಂದ್ರಾ ಬಡಾವಣೆಯಲ್ಲಿ ಬರುವ ಸಿದ್ದಗಂಗಾ ಸ್ಕೂಲ್ ಮುಂದೆ ಇರುವ ಖಾಲಿ ಜಾಗದ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಮಾಹಿತಿ ನೀಡಲು ಹಾಗೂ ಸಂಬಂಧಪಟ್ಟ ಕಾಮಗಾರಿ ಕಡತವನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಸೂಚಿಸಿದರು.

ಸಮಿತಿ ಅನುಮೋದನೆಯನ್ನು ನಿರೀಕ್ಷಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೆಂದು, ಸದರಿ ಕಡತವು ಮುಖ್ಯ ಅಭಿಯಂತರರು (ದಕ್ಷಿಣ) ವಲಯ ಕಛೇರಿಯಲ್ಲಿದ್ದು, ಸಮಿತಿಯ ಪರಿಶೀಲನೆಗೆ ಕಡತವನ್ನು ಕಳುಹಿಸಲಾಗುತ್ತದೆಂದು ಅಧಿಕಾರಿಗಳು ತಿಳಿಸಿದರು.

**<u>ಅಧ್ಯಕ್ಷರು</u>** : ಸಮಿತಿಯ ಸಭೆಯಲ್ಲಿ ಪರಿಶೀಲನೆಗೆ ಅಗತ್ಯವಿದ್ದ ಕಡತಗಳ ಕುರಿತು ಮಾಹಿತಿ ಒದಗಿಸುವಂತೆ ಸೂಚಿಸಿದಲ್ಲಿ, ಅದಕ್ಕೆ ಸಂಬಂಧಪಟ್ಟ ಕಡತವನ್ನು ಸಭೆಯಲ್ಲಿ ಹಾಜರುಪಡಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಸೂಚಿಸಿದರು. 2010–11ನೇ ಸಾಲಿನ ಆಯವ್ಯಯದಲ್ಲಿ ಲಕ್ಕಸಂದ್ರ ಕ್ವಾರಿ ಅಭಿವೃದ್ಧಿ ಹಾಗೂ ಜೆ.ಪಿ.ಪಾರ್ಕ್ ಸುಂದರೀಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಕಡತವು ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ಬೃಂದಾವನದ ಜಿಂಕೆ ತೋಟದ ಅಭಿವೃದ್ಧಿ ಮತ್ತು ಇತರೇ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕಾಮಗಾರಿಗಳು ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದಾಗ, ರೂ.1.00ಕೋಟಿಯ ಈ ಕಾಮಗಾರಿಯು ಎಲೆಕ್ಟ್ರಿಕಲ್‌ಗೆ ಸಂಬಂಧಿಸಿದ ಕಾಮಗಾರಿಯಾಗಿರುವುದರಿಂದ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವು ದೆಂದು ತಿಳಿಸಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ಕೆಂಪಾಂಬುದಿ ಕೆರೆ ಸುಂದರೀಕರಣಕ್ಕೆ ಸಂಬಂಧಪಟ್ಟಂತೆ ಕಾಮಗಾರಿ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ಸಲ್ಲಿಸುವಂತೆ ಅಧ್ಯಕ್ಷರು ಸೂಚಿಸಿದರು. ಕೆಂಪಾಂಬುದಿ ಕೆರೆ ಸ್ಟೇಜ್ 1 ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ, ಇದು Spill over work ಆಗುತ್ತದೆಂದು, ಈಗ ಇದು ಚಿಕ್ಕಪೇಟೆ ವಿಭಾಗಕ್ಕೆ ಹಸ್ತಾಂತರಗೊಂಡಿದೆಯೆಂದು ಅಧಿಕಾರಿಗಳು ತಿಳಿಸಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ಸುಬ್ರಮಣ್ಯನಗರದಲ್ಲಿ ಸಂಗೊಳ್ಳಿ ರಾಯಣ್ಣ ಉದ್ಯಾನವನವನ್ನು ಹಾಗೂ ಸುಬ್ರಮಣ್ಯನಗರ ಉದ್ಯಾನವನ ಅಭಿವೃದ್ಧಿ ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಕಾಮಗಾರಿಯು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ಸಲ್ಲಿಸುವಂತೆ ಅಧ್ಯಕ್ಷರು ಸೂಚಿಸಿದರು.

ಸಂಗೊಳ್ಳಿ ರಾಯಣ್ಣ ಉದ್ಯಾನವನವನ್ನು ರೂ.1.50ಕೋಟಿ ಅನುದಾನವನ್ನು ಮೀಸಲಿರಿಸಿದ್ದು, ರೂ.50.00ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ವರ್ಕ್ ಕೋಡ್ ಇನ್ನು ಆಗಿಲ್ಲವೆಂದು ಅಧಿಕಾರಿಗಳು, ತಿಳಿಸಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ಜೀವರಾಜ್ಆಳ್ವ ರಸ್ತೆ ಬಳಿ ಮಕ್ಕಳ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಕಾಮಗಾರಿಯು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ಅಧ್ಯಕ್ಷರು ಸೂಚಿಸಿದರು.

ಸದರಿ ಕಾಮಗಾರಿಗೆ ಎಸ್ಟಿಮೇಟ್ ತಯಾರಿಸಿದ್ದು, ರೂ.50.00 ಲಕ್ಷಗಳ ಕಾಮಗಾರಿ ನಡೆಯುತ್ತಿರುವುದಾಗಿ ರೂ.2.00 ಕೋಟಿಗೆ ಪರಿಶೀಲನೆಯಾಗಬೇಕೆಂದು, ಎಲ್ಲಾ ಕಾಮಗಾರಿಗಳು Spill over work ಗಳೆಂದು ಅಧಿಕಾರಿಗಳು, ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿಕೊಂಡು ಅಭಿವೃದ್ಧಿಗೊಳಿಸಬೇಕಾಗಿರುವ ಉದ್ಯಾನವನಗಳ ಕಾಮಗಾರಿಗಳ ವಿವರಗಳ ಮಾಹಿತಿ ನೀಡುವಂತೆ ಸೂಚಿಸಿದರು. 2011–12ನೇ ಸಾಲಿನಲ್ಲಿ ಕಾರ್ಯಪಾಲಕ ಅಭಿಯಂತರರು(ಯೋಜನೆ) ಅಡಿಯಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು, ಸುಮಾರು ರೂ.150.00 ಕೋಟಿ ಅನುದಾನವನ್ನು ಹಾಗೂ ಉದ್ಯಾನವನಗಳನ್ನು ನಿರ್ವಹಣೆ ಮಾಡಲು, ಸುಮಾರು ರೂ.30.00 ಕೋಟಿ ಅನುದಾನವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆಯಲಾಗಿದೆಯೆಂದು, ಇನ್ನೂ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದಲ್ಲಿ ಸಭೆಯಲ್ಲಿ ತಿಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಶ್ರೀ.ಕೇಶವಮೂರ್ತಿ, ಸಮಿತಿ ಸದಸ್ಯರು** ಮಾತನಾಡುತ್ತಾ, ಹಳೆಯ ವಾರ್ಡ್‌ಗಳಿಗೆ ಹೆಚ್ಚಿನ ಅನುದಾನದ ಅವಶ್ಯಕತೆ ಕಂಡು ಬರುವುದಿಲ್ಲ. ಆದರೆ, ಹೊಸ ವಲಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇರುತ್ತದೆಂದು ತಿಳಿಸುತ್ತಾ, ಉದ್ಯಾನವನಗಳಿಗೆ ಅಳವಡಿಸಿರುವ ಗ್ರಿಲ್‌ಗಳು ಬಹಳಷ್ಟು ಕಡೆ ತುಕ್ಕು ಹಿಡಿದು ಹಾಳಾಗಿದ್ದು, ಅಂತಹವುಗಳನ್ನು ಬದಲಿಸುವಂತೆ ಹಾಗೂ ಮಳೆಯಿಂದ ತುಕ್ಕು ಹಿಡಿಯದಂತೆ ಉತ್ತಮ ರೀತಿಯ ಗ್ರಿಲ್‌ಗಳನ್ನು ಅಳವಡಿಸಿ, ಕಾಲಕಾಲಕ್ಕೆ ಅವುಗಳಿಗೆ ಬಣ್ಣ ಬಳಿಯುವಂತೆ ಸಲಹೆ ನೀಡಿದರು.

**ಶ್ರೀ.ರವಿಕುಮಾರ್, ಸ.ಕಾ.ನಿ.ಅ(ಯೋಜನೆ–ಪಶ್ಚಿಮ) ರವರು ಮಾತನಾಡುತ್ತಾ,** 2011–12ನೇ ಸಾಲಿನಲ್ಲಿ ಕಾರ್ಯಪಾಲಕ ಅಭಿಯಂತರರು(ಯೋಜನೆ) ಅಡಿಯಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು, ಸುಮಾರು ರೂ.150.00 ಕೋಟಿ ಅನುದಾನವು ಸಾಕಾಗುವುದಿಲ್ಲವೆಂದು, ರೂ.200.00ಕೋಟಿ ಅನುದಾನವನ್ನು ಮೀಸಲಿಡುವಂತೆ ಮನವಿ ಸಲ್ಲಿಸಿದರು.

ಸಭೆಗೆ ಹಾಜರಿದ್ದ ಅಧಿಕಾರಿಗಳು ಸಿಬ್ಬಂದಿ ಕೊರತೆಯ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಪಶ್ಚಿಮ ವಲಯ ಕಛೇರಿಯಲ್ಲಿ 33 ವಾರ್ಡ್‌ಗಳಿದ್ದು, ಅಷ್ಟು ವಾರ್ಡ್‌ಗಳಲ್ಲಿ ಒಬ್ಬರೇ ಸಹಾಯಕ ಅಭಿಯಂತರರು ಕೆಲಸ ನಿರ್ವಹಿಸುತ್ತಿದ್ದು, ಕೆಲಸಕಾರ್ಯಗಳನ್ನು ತ್ವರಿತವಾಗಿ ನಿರ್ವಹಿಸಲು ಇನ್ನೊಬ್ಬ ಸಹಾಯಕ ಅಭಿಯಂತರರನ್ನು ನಿಯೋಜಿಸಲು ಕೋರಿದರು.

ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ತಮ್ಮ ವಲಯಗಳಲ್ಲಿ ಅವಶ್ಯಕತೆ ಇರುವ ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಿ ಸಮಿತಿಗೆ ಸಲ್ಲಿಸಲು ಸೂಚಿಸಿದರು. ಈ ಕುರಿತು ಮಾನ್ಯ ಆಯುಕ್ತರೊಂದಿಗೆ ಚರ್ಚಿಸಿ ಅತ್ಯಾವಶ್ಯಕತೆ ಇರುವ ಸ್ಥಳಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲು ಪ್ರಯತ್ನಿಸಲಾಗುವುದೆಂದು ತಿಳಿಸಿದರು.

ಕಾಮಗಾರಿಗಳ ವರ್ಕ್ ಕೋಡ್‌ಗೆ ಯಾವ ಯಾವ ಕಡತಗಳು ಬಾಕಿ ಇವೆ ಎಂಬುದನ್ನು ಪಟ್ಟಿ ಮಾಡಿ ಸಮಿತಿಗೆ ಸಲ್ಲಿಸುವಂತೆ, ಈ ಕುರಿತು ಮುಖ್ಯಲೆಕ್ಕಾಧಿಕಾರಿಗಳೊಂದಿಗೆ ಚರ್ಚಿಸಿ ವರ್ಕ್‌ಕೋಡ್ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಸೂಚಿಸಿದರು.

**ಶ್ರೀ.ಡಿ.ಎಂ.ಸುಬ್ಬಣ್ಣ, ತೋಟಗಾರಿಕೆ ಅಧೀಕ್ಷಕರು(ದಕ್ಷಿಣ–2)** ರವರು ಮಾತನಾಡುತ್ತಾ, ಉದ್ಯಾನವನಗಳ ನಿರ್ವಹಣೆಗೆ ಸುಮಾರು ರೂ.18.39ಕೋಟಿ ಬೇಕಾಗುತ್ತದೆ. ಆದರೆ, ರೂ.5.00ಕೋಟಿ ಮಾತ್ರ ಕೊಟ್ಟಿದ್ದಾರೆ. ಕೋಡ್ ಇಲ್ಲದೆ ಟೆಂಡರ್ ಕರೆಯುವುದಕ್ಕೆ ಆಗುವುದಿಲ್ಲ. ಪಾಲಿಕೆ ವ್ಯಾಪ್ತಿಯಲ್ಲಿ 184 ಉದ್ಯಾನವನಗಳು ಬರುತ್ತವೆ. 108 ಉದ್ಯಾನವನಗಳನ್ನು ಪ್ರೈವೇಟ್ ರವರಿಗೆ ಕೊಡಲಾಗಿದೆ. 108 ಉದ್ಯಾನವನಗಳಿಗೆ ರೂ.194.00ಲಕ್ಷ ಬೇಕಾಗುತ್ತದೆ. 2010–11ನೇ ಸಾಲಿನಲ್ಲಿ ಬೋರ್‌ವೆಲ್ ನಿರ್ವಹಣೆಗೆ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. 2009–10ನೇ ಸಾಲಿನ ಅನುದಾನದಲ್ಲಿಯೇ ಇದುವರೆವಿಗೂ ನಿರ್ವಹಿಸಲಾಗುತ್ತಿದೆ ಎಂದು, ಈ ವರ್ಷ ರೂ.2.00ಕೋಟಿ ಅನುದಾನವನ್ನು ಕಾಯ್ದಿರಿಸಲಾಗಿದೆಯೆಂದು ತಿಳಿಸಿದರು.

**ಅಧ್ಯಕ್ಷರು** : ಬೋರ್‌ವೆಲ್‌ಗಳನ್ನು ಕೊರೆಸುವಾಗ, ಭೂ ತಜ್ಞರಿಂದ ಅಂತರ್ಜಲವನ್ನು ಪರಿಶೀಲಿಸಿ, ನೀರಿನ ಸೋರ್ಸ್ ಇರುವ ಕಡೆ, ಮಾತ್ರ ಬೋರ್‌ವೆಲ್ ಕೊರೆಸಿ, ನೀರು ಬರದೇ ಇರುವ ಕಡೆಗಳಲ್ಲಿ ಕೊರೆಸಿ, ಹಣವ್ಯಯ ಮಾಡುವುದು ಬೇಡವೆಂದು, ಅದರ ಬದಲು ಬೇರೆ ವ್ಯವಸ್ಥೆ ಅಂದರೆ, ಟ್ಯಾಂಕರ್‌ಗಳಿಂದ ನೀರು ಸರಬರಾಜು ಮಾಡಬಹುದು ಎಂದು ಸಲಹೆ ನೀಡಿದರು. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ನೋ ವಾಟರ್, ನೋ ಮನಿ ಎಂಬ ಸ್ಕೀಮ್‌ನ್ನು ಮಾಡುತ್ತಿದ್ದು, ಅದನ್ನು ನಮ್ಮ ಬಿಬಿಎಂಪಿಯಲ್ಲಿ ಅಳವಡಿಸಿಕೊಂಡರೆ ಒಳ್ಳೆಯದೆಂದು ಸಲಹೆ ನೀಡಿದರು.

ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಶೇ.100% ಅಲ್ಲದಿದ್ದರೂ 60% ಆದರೂ ಉತ್ತಮ ಗುಣಮಟ್ಟದ ಕೆಲಸಗಳಾಗಬೇಕೆಂದು, ಬೆಂಗಳೂರು ನಗರವು ಸುಂದರ ಉದ್ಯಾನವನಗಳ ನಗರವೆಂದು ಗುರುತಿಸಿಕೊಳ್ಳಲು, ತಮ್ಮೆಲ್ಲರ ಸಲಹೆ, ಸಹಕಾರಗಳು ಅತ್ಯಾಮೂಲ್ಯವಾಗಿದ್ದು, ಎಲ್ಲರೂ ಶ್ರಮ ವಹಿಸಿ ಕೆಲಸ ನಿರ್ವಹಿಸಬೇಕೆಂದು ಈ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ತೊಂದರೆಗಳಿದ್ದರೆ ಸಮಿತಿಗೆ ಮಾಹಿತಿ ನೀಡುವಂತೆ ಸೂಚಿಸಿದರು.

ಅಧ್ಯಕ್ಷರು ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **ವಿಷಯ ಸಂಖ್ಯೆ:ತೋ/ಸ್ಥಾ/ಸ/11/10-11, ದಿನಾಂಕ: 24-01-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1079 ತೆರೆದ ಪ್ರದೇಶಗಳಿದ್ದು, ಅವುಗಳಲ್ಲಿ 778 ತೆರೆದ ಪ್ರದೇಶಗಳನ್ನು ಭೂವಿನ್ಯಾಸಗೊಳಿಸಿ ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 301 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿದೆ. ಪಾಲಿಕೆಯ ತೋಟಗಾರಿಕೆ ವಿಭಾಗದಲ್ಲಿ ಉದ್ಯಾನವನಗಳ ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇರುವುದರಿಂದ ಅಭಿವೃದ್ಧಿ ಪಡಿಸಿರುವ 778 ಉದ್ಯಾನವನಗಳಲ್ಲಿ 33 ಉದ್ಯಾನವನಗಳನ್ನು ದತ್ತು ನೀಡಲಾಗಿದೆ. 138 ಉದ್ಯಾನವನಗಳನ್ನು ಇಲಾಖೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಉಳಿದ 607 ಉದ್ಯಾನವನಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ಮಾಡಲಾಗುತ್ತಿದೆ.

2010-11ನೇ ಸಾಲಿನ ಆಯವ್ಯಯ ಅಂದಾಜುಗಳು ಪುಸ್ತಕದ ಪುಟ 98 ರಲ್ಲಿ ಬೋರ್‌ವೆಲ್‌ಗಳು, ಪಂಪ್ ಸೆಟ್‌ಗಳು ಮತ್ತು ಪೈಪ್ ಲೈನ್‌ಗಳ ನಿರ್ವಹಣೆಯಡಿ (P0299) ಚಾಲ್ತಿ ಕಾಮಗಾರಿಗಳಿಗೆ (Current Works) ಯಾವುದೇ ಅನುದಾನ ನಿಗಧಿಪಡಿಸಿರುವುದಿಲ್ಲ. ಇದರಿಂದ ಬೋರ್‌ವೆಲ್‌ಗಳು, ಪಂಪ್‌ಸೆಟ್‌ಗಳು ಮತ್ತು ಪೈಪ್‌ಲೈನ್‌ಗಳ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಇದರಿಂದ ಉದ್ಯಾನವನಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, 2010-11 ನೇ ಸಾಲಿಗೆ ಬೋರ್‌ವೆಲ್‌ಗಳು, ಪಂಪ್‌ಸೆಟ್‌ಗಳು ಮತ್ತು ಪೈಪ್‌ಲೈನ್‌ಗಳ ನಿರ್ವಹಣೆಗೆ (P0299) ಹೆಚ್ಚುವರಿಯಾಗಿ ಚಾಲ್ತಿ ಕಾಮಗಾರಿಗಳಿಗೆ (Current Works) ಈ ಕೇಳಕಂಡಂತೆ ಅನುದಾನ ಒದಗಿಸಬಹುದೆಂದು ಮಾನ್ಯ ಆಯುಕ್ತರು ಅಭಿಪ್ರಾಯಿಸಿದ್ದಾರೆ.

| ಕ್ರ. ಸಂ. | ವಲಯಗಳು | 2010-11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) | 2010-11ನೇ ಸಾಲಿಗೆ ಹೆಚ್ಚುವರಿಯಾಗಿ ಬೇಕಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1. | ಪೂರ್ವ | 00.00 | 25.00 |
| 2. | ಪಶ್ಚಿಮ | 00.00 | 95.00 |
| 3. | ದಕ್ಷಿಣ-1 | 00.00 | 135.00 |
| 4. | ದಕ್ಷಿಣ-2 | 00.00 | 32.00 |
| 5. | ಮಹದೇವಪುರ | 00.00 | 3.00 |
| 6. | ಯಲಹಂಕ | 00.00 | 00.00 |
| 7. | ದಾಸರಹಳ್ಳಿ | 00.00 | 10.00 |
| 8. | ರಾಜರಾಜೇಶ್ವರಿನಗರ | 00.00 | 20.00 |

| | | | |
|---|---|---|---|
| 9. | ಬೊಮ್ಮನಹಳ್ಳಿ | 00.00 | 20.00 |
| 10. | ಮೀಡಿಯನ್ಸ್ & ಸರ್ಕಲ್ಸ್ | 00.00 | 10.00 |
| 11. | **ಒಟ್ಟು** | **00.00** | **250.00** |

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:01–01–2011 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ಆಯುಕ್ತರ ದಿನಾಂಕ:01–01–2011ರ ಟಿಪ್ಪಣಿಯನ್ನು ಒಪ್ಪಿದೆ.**

**2) ವಿಷಯ ಸಂಖ್ಯೆ:ತೋ/ಸ್ಥಾ/ಸ/11/10–11, ದಿನಾಂಕ: 24–01–2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1079 ತೆರೆದ ಪ್ರದೇಶಗಳಿದ್ದು, ಅವುಗಳಲ್ಲಿ 778 ತೆರೆದ ಪ್ರದೇಶಗಳನ್ನು ಭೂವಿನ್ಯಾಸಗೊಳಿಸಿ ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 301 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿದೆ. ಪಾಲಿಕೆಯ ತೋಟಗಾರಿಕೆ ವಿಭಾಗದಲ್ಲಿ ಉದ್ಯಾನವನಗಳ ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇರುವುದರಿಂದ ಅಭಿವೃದ್ಧಿ ಪಡಿಸಿರುವ 778 ಉದ್ಯಾನವನಗಳಲ್ಲಿ 33 ಉದ್ಯಾನವನಗಳನ್ನು ದತ್ತು ನೀಡಲಾಗಿದೆ. 138 ಉದ್ಯಾನವನಗಳನ್ನು ಇಲಾಖೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಉಳಿದ 607 ಉದ್ಯಾನವನಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ಮಾಡಲಾಗುತ್ತಿದೆ.

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದ ಪುಟ 68 ರಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆಯಡಿ (P0088) ಬಾಕಿ ಬಿಲ್ಲುಗಳ ಹೊಣೆಗಾರಿಕೆಗೆ (Pending Bills) ರೂ.1337.28 ಲಕ್ಷ ಮತ್ತು ಮುಂದುವರೆದ ಕಾಮಗಾರಿಗಳಿಗೆ (Spill Over Works) ರೂ.1157.70 ಲಕ್ಷಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ (Current Works) ಕೇವಲ ರೂ.500.00 ಲಕ್ಷಗಳನ್ನು ಮಾತ್ರ ನಿಗಧಿಪಡಿಸಲಾಗಿದೆ. ಒಟ್ಟು ರೂ.2994.98 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.

ಚಾಲ್ತಿ ಕಾಮಗಾರಿಗಳಿಗೆ (Current Works) ನಿಗಧಿಪಡಿಸಲಾದ ರೂ.500.00 ಲಕ್ಷಗಳ ಅನುದಾನದಲ್ಲಿ ಉದ್ಯಾನವನಗಳ ನಿರ್ವಹಣೆ ಮಾಡುವುದು ಬಹಳ ಕಷ್ಟಕರವಾಗಿದೆ. ಆದ್ದರಿಂದ, ಬಾಕಿ ಬಿಲ್ಲುಗಳ ನಿರ್ವಹಣೆಗೆ (Pending Bills) ನಿಗಧಿಪಡಿಸಿರುವ ಅನುದಾನ ರೂ.1337.28 ಲಕ್ಷ ಮತ್ತು ಮುಂದುವರೆದ ಕಾಮಗಾರಿಗಳಿಗೆ (Spill Over Works) ನಿಗಧಿಪಡಿಸಿರುವ ಅನುದಾನ ರೂ.1157.70 ಲಕ್ಷ ಒಟ್ಟು ರೂ.2494.98 ಲಕ್ಷಗಳು 2010–11ನೇ ಸಾಲಿಗೆ ಅವಶ್ಯಕತೆ ಇರುವುದಿಲ್ಲ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆಯಡಿ (P0088) ಲೆಕ್ಕ ಶೀರ್ಷಿಕೆಯಡಿ ನಿಗಧಿಪಡಿಸಿರುವ ಒಟ್ಟು 2494.98 ಲಕ್ಷಗಳ ಅನುದಾನದಲ್ಲಿ ದಿನಾಂಕ: 01–4–2010 ರಿಂದ 30–11–2010 ರವರೆಗೆ ರೂ.1565.52 ಲಕ್ಷಗಳು ಖರ್ಚಾಗಿರುತ್ತವೆ. ಖರ್ಚಾಗಿರುವ ವಿವರವನ್ನು ಪುಟ 6–7 ರಲ್ಲಿ ಸಲ್ಲಿಸಲಾಗಿದೆ. ಆದ್ದರಿಂದ, ಉಳಿಕೆ ಅನುದಾನ ರೂ.1429.46 ಲಕ್ಷಗಳ ಅನುದಾನವನ್ನು (2994.98–1565.52=1429.46ಲಕ್ಷಗಳು) 2010–11ನೇ ಸಾಲಿಗೆ ಚಾಲ್ತಿ ಕಾಮಗಾರಿಗಳಿಗೆ (Current Works)

ಮರು ಹೊಂದಾಣಿಕೆ (Re-appropriation) ಮಾಡಿಕೊಡಬಹುದೆಂದು ಆಯುಕ್ತರು ಅಭಿಪ್ರಾಯಿಸಿದೆಯೆಂದು ತಿಳಿಸಿದ್ದು, ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:25–01–2011 ರ ಟಿಪ್ಪಣಿ.

**<u>ನಿರ್ಣಯ :</u>** ದಿನಾಂಕ:25–01–2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, 2010–11 ನೇ ಸಾಲಿನ ಚಾಲ್ತಿ ಕಾಮಗಾರಿಗಳಿಗೆ ಮರು ಹೊಂದಾಣಿಕೆ ಮಾಡಿ ಕೊಡ ಬಹುದೆಂದು ಅಭಿಪ್ರಾಯಿಸಿದ ಉಳಿಕೆ ಅನುದಾನ ರೂ. 1429.46ಲಕ್ಷಗಳಲ್ಲಿ 429.46ಲಕ್ಷಗಳನ್ನು 2010–11 ನೇ ಸಾಲಿನ ಉದ್ಯಾನವನ ನಿರ್ವಹಣೆಗೆ ಕಾಯ್ದಿರಿಸಿ, ಉಳಿಕೆ 10.00ಕೋಟಿಗಳ ಅನುದಾನವನ್ನು ಈ ಕೆಳಕಂಡ ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪಾಲಿಕೆಯ ಹೊಸ ವಾರ್ಡ್‌ಗಳಲ್ಲಿ ಬರುವ ಸಿ.ಎ.ನಿವೇಶನ, ಆಟದ ಮೈದಾನ, ಉದ್ಯಾನವನದ ಜಾಗವನ್ನು ಭೂಗಳ್ಳರಿಂದ ರಕ್ಷಿಸಿಕೊಳ್ಳಲು ಉದ್ಯಾನವನಗಳಿಗೆ ತಂತಿಬೇಲಿ ಮತ್ತು ಗ್ರಿಲ್‌ಗಳನ್ನು ಅಳವಡಿಸಿ ಅಭಿವೃದ್ಧಿಗೊಳಿಸಲು ಸಮಿತಿಯು ಈ ರೀತಿ ನಿರ್ಣಯ ತೆಗೆದುಕೊಂಡಿರುತ್ತದೆ.

| **ವಾರ್ಡ್ ನಂ.** | **ಕಾಯ್ದಿರಿಸಿರುವ ಅನುದಾನ** |
|---|---|
| 159 | ರೂ.2.50ಕೋಟಿ |
| 112 | ರೂ.75.00ಲಕ್ಷಗಳು |
| 19 | ರೂ.75.00ಲಕ್ಷಗಳು |
| 125 | ರೂ.75.00ಲಕ್ಷಗಳು |
| 14 | ರೂ.75.00ಲಕ್ಷಗಳು |
| 70 | ರೂ.75.00ಲಕ್ಷಗಳು |
| 68 | ರೂ.75.00ಲಕ್ಷಗಳು |
| 115 | ರೂ.75.00ಲಕ್ಷಗಳು |
| 77 | ರೂ.75.00ಲಕ್ಷಗಳು |
| 73 | ರೂ.75.00ಲಕ್ಷಗಳು |
| 139 | ರೂ.75.00ಲಕ್ಷಗಳು |

ಈ ಮೇಲಿನ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನವನ್ನು ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ, ಸ್ಥಳೀಯ ಪ್ರಭಾವಿ ಮುಖಂಡರುಗಳು ಸಿ.ಎ.ನಿವೇಶನ, ಅಟದ ಮೈದಾನ, ಉದ್ಯಾನವನಕ್ಕೆ ಕಾಯ್ದಿರಿಸಿರುವ ಜಾಗವನ್ನು ಕಬಳಿಸಲು ಯತ್ನಿಸಿ, ಕೋರ್ಟ್, ಕಛೇರಿಯಲ್ಲಿ ದಾವೆ ಹೂಡುವ ಸಂಭವ ಬರುವ ಪ್ರಯುಕ್ತ, ಮೇಲಿನ ವಾರ್ಡ್‌ಗಳ ಅನುದಾನವನ್ನು ಕೆಆರ್‌ಐಡಿಎಲ್ ಸಂಸ್ಥೆಯಿಂದ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಸಮಿತಿಯು ತೀರ್ಮಾನಿಸಿತು.

ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ, ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :–**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ಮಹದೇವಪುರ) ರವರಿಗೆ ಕಳುಹಿಸಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ